28/2/13

ಕರ್ನಾಟಕ ಸರ್ಕಾರ

M. D.
28 FEB 2013
KPTCL

M.D/KPTCL

ಸಂಖ್ಯೆ:ಸಿಆಸುಇ 04 ಆರ್‌ಟಿಐ 2013

ಕರ್ನಾಟಕ ಸರ್ಕಾರದ ಸಚಿವಾಲಯ,
ಸಿಆಸುಇ (ಜನಸ್ಪಂದನ)
3ನೇ ಮಹಡಿ, ಪೋಡಿಯಂ ಬ್ಲಾಕ್,
ವಿಶ್ವೇಶ್ವರಯ್ಯ ಮುಖ್ಯ ಗೋಪುರ,
ಬೆಂಗಳೂರು, ದಿನಾಂಕ:11.01.2013.

**ಸುತ್ತೋಲೆ**

ವಿಷಯ: ಮಾಹಿತಿ ಹಕ್ಕು ಕಾಯ್ದೆ, 2005ರಡಿ ಮಾಹಿತಿ ಕೋರಿಕೆಗಳನ್ನು ಸ್ವೀಕರಿಸಿದ್ದಕ್ಕೆ ಮಾಹಿತಿ ಕೋರಿಕೆದಾರರಿಗೆ ಸೂಕ್ತ ಸ್ವೀಕೃತಿಯನ್ನು ನೀಡುವ ಬಗ್ಗೆ.

Dir.(Admn)

\- - -

ಕರ್ನಾಟಕ ಮಾಹಿತಿ ಆಯೋಗವು ತನ್ನ ಮುಂದೆ ದಾಖಲಾಗಿದ್ದ ಪ್ರಕರಣ ಸಂಖ್ಯೆ:ಕೆಐಸಿ 2489 ಪಿಟಿಎನ್ 2012ರಲ್ಲಿ [ಶ್ರೀ ಜಿ.ವಿನ್ಸಂಟ್ ವಿರುದ್ಧ ಸಾರ್ವಜನಿಕ ಮಾಹಿತಿ ಅಧಿಕಾರಿ ಮತ್ತು ಸರ್ಕಾರದ ಅಧೀನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವಾ ನಿಯಮಗಳು)] ಮಾಹಿತಿ ಹಕ್ಕು ಕಾಯ್ದೆ, 2005ರಡಿ ಮಾಹಿತಿ ಕೋರಿಕೆಗಳನ್ನು ಸ್ವೀಕರಿಸಿದ್ದಕ್ಕೆ ಮಾಹಿತಿ ಕೋರಿಕೆದಾರರಿಗೆ ಸೂಕ್ತ ಸ್ವೀಕೃತಿಯನ್ನು ನೀಡುವ ಬಗ್ಗೆ ಸರ್ಕಾರಕ್ಕೆ ಸೂಚನೆಗಳನ್ನು ನೀಡಿರುತ್ತದೆ.

4/3/13

ಮಾಹಿತಿ ಹಕ್ಕು ಕಾಯ್ದೆ, 2005ರಡಿ ಮಾಹಿತಿ ಕೋರಿಕೆಗಳನ್ನು ಅಂಚೆ ಮೂಲಕವಾಗಲೀ ಅಥವಾ ಖುದ್ದು ಮಾಹಿತಿ ಕೋರಿಕೆದಾರರಿಂದಾಗಲೀ ಅಥವಾ ಇಲಾಖೆ/ಕಛೇರಿಯ ಮಾಹಿತಿ ಹಕ್ಕು ಕೋಶದ ಮೂಲಕವಾಗಲೀ ಸ್ವೀಕರಿಸುವ ಸಿಬ್ಬಂದಿಯು ಮಾಹಿತಿ ಕೋರಿಕೆಯು ಅಧಿಕೃತವಾಗಿ ಸ್ವೀಕೃತವಾಗಿದ್ದಕ್ಕೆ ಮಾಹಿತಿ ಕೋರಿಕೆದಾರರಿಗೆ ತನ್ನ ಸಹಿ, ದಿನಾಂಕ ಮತ್ತು ಇಲಾಖೆಯ ಮೊಹರಿನೊಂದಿಗೆ ತನ್ನ ಹೆಸರನ್ನೂ ಸಹ ಸ್ಪಷ್ಟವಾಗಿ ಬರೆದು ಸ್ವೀಕೃತಿಯನ್ನು ಕೊಡಬೇಕೆಂದು ಈ ಮೂಲಕ ಸೂಚಿಸಲಾಗಿದೆ.

WCA(L)

BSA

5/3/13

(ಪರಮೇಶ್ ಪಾಂಡೆ)
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಜನಸ್ಪಂದನ)

ಇವರಿಗೆ.

1.ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು.
2.ಎಲ್ಲಾ ಇಲಾಖಾ ಮುಖ್ಯಸ್ಥರುಗಳು
3.ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು/ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು
4.ಎಲ್ಲಾ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳು

ಪ್ರತಿ:- ಮಾಹಿತಿಗಾಗಿ

1. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ವಿಧಾನ ಸೌಧ
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ, ವಿಧಾನಸೌಧ
3. ಕಾರ್ಯದರ್ಶಿಗಳು, ಕರ್ನಾಟಕ ಮಾಹಿತಿ ಆಯೋಗ, ಬಹು ಮಹಡಿ ಕಟ್ಟಡ.

7789

13

**ಕರ್ನಾಟಕ ಸರ್ಕಾರ**

ಸಂಖ್ಯೆ:ಸಿಆಸುಇ 26 ಆರ್‌ಟಿಐ 2013

ಕರ್ನಾಟಕ ಸರ್ಕಾರದ ಸಚಿವಾಲಯ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಜನಸ್ಪಂದನ)
3ನೇ ಮಹಡಿ, ಪೋಡಿಯಂ ಬ್ಲಾಕ್,
ವಿಶ್ವೇಶ್ವರಯ್ಯ ಮುಖ್ಯ ಗೋಪುರ,
ಬೆಂಗಳೂರು, ದಿನಾಂಕ : 13.02.2013.

**ಸುತ್ತೋಲೆ**

ವಿಷಯ: ಕರ್ನಾಟಕ ಮಾಹಿತಿ ಆಯೋಗದ ಮುಂದೆ ದಾಖಲಾದ ಪ್ರಕರಣಗಳಲ್ಲಿ ಪ್ರತಿವಾದಿಗಳಾಗುವ ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಪರವಾಗಿ ಹಾಜರಾಗುವ ಸಿಬ್ಬಂದಿಗಳಿಗೆ ಅವಶ್ಯ ಅಧಿಕಾರ ಪತ್ರವನ್ನು ನೀಡುವ ಬಗ್ಗೆ.

– – –

ಕರ್ನಾಟಕ ಮಾಹಿತಿ ಆಯೋಗವು ತನ್ನ ಮುಂದೆ ದಾಖಲಾಗಿದ್ದ ಪ್ರಕರಣ ಸಂಖ್ಯೆ:ಕೆಐಸಿ 9746 ಪಿಟಿಎನ್ 2011ರಲ್ಲಿ [ಶ್ರೀ ರಾಮಲಿಂಗರೆಡ್ಡಿ – ವಿರುದ್ಧ – ಸಾರ್ವಜನಿಕ ಮಾಹಿತಿ ಅಧಿಕಾರಿ, ಡಿಜಿ ಮತ್ತು ಐಜಿಪಿ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು] ದಿನಾಂಕ 11.12.2012ರಂದು ನೀಡಿದ ಆದೇಶದಲ್ಲಿ ಸೂಚಿಸಿರುವಂತೆ ಕರ್ನಾಟಕ ಮಾಹಿತಿ ಆಯೋಗದ ಮುಂದೆ ದಾಖಲಾದ ಪ್ರಕರಣಗಳಲ್ಲಿ ಪ್ರತಿವಾದಿಗಳಾಗುವ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಕರ್ನಾಟಕ ಮಾಹಿತಿ ಆಯೋಗದ ಮುಂದೆ ತಮ್ಮ ಪರವಾಗಿ ಹಾಜರಾಗಲು ನಿಯೋಜಿಸಿದ ಸಿಬ್ಬಂದಿಗಳಿಗೆ ಇನ್ನು ಮುಂದೆ ಅಧಿಕಾರ ಪತ್ರವನ್ನು ತಪ್ಪದೇ ನೀಡಬೇಕೆಂದು ಈ ಮೂಲಕ ಸೂಚಿಸಲಾಗಿದೆ.

(ಪರಮೇಶ್ ಪಾಂಡೆ)
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಜನಸ್ಪಂದನ)

ಎಸ್. ಕೆ. ಪಟ್ಟನಾಯಕ್
ಸರ್ಕಾರದ ಪ್ರಧಾನ ಕಾರ್ಯದರ್ಶಿ

ಇವರಿಗೆ,

1.ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು.
2.ಎಲ್ಲಾ ಇಲಾಖಾ ಮುಖ್ಯಸ್ಥರುಗಳು
3.ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು / ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು
4.ಎಲ್ಲಾ ಜಿಲ್ಲೆಗಳ ಪೋಲೀಸ್ ವರಿಷ್ಠಾಧಿಕಾರಿಗಳು

ಪ್ರತಿ:– ಮಾಹಿತಿಗಾಗಿ

1.ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ವಿಧಾನ ಸೌಧ
2.ಕಾರ್ಯದರ್ಶಿಗಳು, ಕರ್ನಾಟಕ ಮಾಹಿತಿ ಆಯೋಗ, ಬಹು ಮಹಡಿ ಕಟ್ಟಡ.